ಬೆಸ್ಕಾಂ ವಿದ್ಯುತ್ ಅದಾಲತ್ 1988 ಗ್ರಾಹಕರು ಭಾಗಿ

ಬೆಂಗಳೂರು: ಗ್ರಾಮೀಣ ಭಾಗದ ಗ್ರಾಹಕರ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಪರಿಹಾರಕ್ಕೆ ಆಯೋಜಿಸಲಾಗಿದ್ದ ವಿದ್ಯುತ್ ಅದಾಲತ್‌ಗೆ ಉತ್ತಮ ಪ್ರತಿಕ್ರಿಯೆ ದೊರಕಿದ್ದು, 1988 ಗ್ರಾಹಕರು ಭಾಗಿಯಾಗಿದ್ದಾರೆ. ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಮಾಹಿತಿ ನೀಡಿ,8 ಜಿಲ್ಲೆಗಳ 87 ಹಳ್ಳಿಗಳಲ್ಲಿ ಆಯೋಜಿಸಿದ್ದ ವಿದ್ಯುತ್ ಅದಾಲತ್‌ನಲ್ಲಿ 1988 ಗ್ರಾಹಕರು ಭಾಗವಹಿಸಿ 856 ಮನವಿಗಳನ್ನು ಸಲ್ಲಿಸಿದರು. ಗ್ರಾಹಕರಿಂದ ಸ್ವೀಕೃತವಾದ ಮನವಿಗಳ ಪೈಕಿ 323 ಮನವಿಗಳಿಗೆ ಬೆಸ್ಕಾಂ ಅಧಿಕಾರಿಗಳು ಸ್ಥಳದಲ್ಲೇ ಪರಿಹಾರ ಒದಗಿಸಿದ್ದು, ಇನ್ನುಳಿದ 533 ಮನವಿಗಳು ಬಾಕಿ ಉಳಿದಿದೆ. ಸಾಮಾನ್ಯವಾಗಿ ವಿದ್ಯುತ್ ಸಂಬಂಧಿತ ದೂರುಗಳಿದ್ದಲ್ಲಿ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲು ದೂರವಾಣಿ ಸಂಪರ್ಕ ಇಲ್ಲವೇ ಖುದ್ದು ಕಚೇರಿಗೆ ತೆರಳಿ ದೂರುಗಳನ್ನು ನೀಡಬೇಕಾಗುತ್ತದೆ. ಆದರೆ, ವಿದ್ಯುತ್ ಅದಾಲತ್ ಕಾರ್ಯಕ್ರಮದಲ್ಲಿ ನಿಗದಿತ ಸ್ಥಳದಲ್ಲಿ ನಿಗದಿತ ಸಮಯಕ್ಕೆ ಬೆಸ್ಕಾಂನ ಹಿರಿಯ ಅಧಿಕಾರಿಗಳು, ಎಂಜಿನಿಯರ್, ಸಿಬ್ಬಂದಿಗಳು ಹಾಜರಿದ್ದು ಅಹವಾಲು ಸ್ವೀಕರಿಸಿ ತ್ವರಿತಗತಿಯಲ್ಲಿ ಸಮಸ್ಯೆಯನ್ನು ವಿಲೇವಾರಿ ಮಾಡುತ್ತಾರೆ ಎಂದರು.

ಭಾರತೀಯ ಸ್ಟೇಟ್‌ಬ್ಯಾಂಕ್ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯಡಿ ಐಐಎಸ್‌ಸಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ (ಮೂಳೆ ಚಿಕಿತ್ಸಾ ವಿಭಾಗ) ನಿರ್ಮಾಣಕ್ಕೆ 24 ಕೋಟಿ ರು. ದೇಣಿಗೆ ನೀಡಿತು. ಬ್ಯಾಂಕಿನ ನೆಟ್‌ವರ್ಕ್-2 ವಿಭಾಗದ ಜಿಎಂ ಸಂದೀಪ್ ಭಟ್ನಾಗರ್, ಚೀಫ್ ಜನರಲ್ ಮ್ಯಾನೇಜರ್ ನಂದನ್ ಕಿಶೋರ್, ಐಐಎಸ್‌ಸಿ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್, ಆಡಳಿತ ಮತ್ತು ಹಣಕಾಸು ವಿಭಾಗದ ಡೀನ್ ಪ್ರೊ.ಅನಿಲ್‌ಕುಮಾರ್ ಇದ್ದರು.

ಬೇಸಿಗೆ ಮಳೆಗೆ ನಗರದ ಕೆಲವೆಡೆ ರಸ್ತೆ ಜಲಾವೃತ

ಬೆಂಗಳೂರು: ನಗರದಲ್ಲಿ ಶುಕ್ರವಾರ ಆರಂಭವಾದ ಬೇಸಿಗೆ ಮಳೆ ಶನಿವಾರ ಮುಂಜಾವಿನವರೆಗೂ ಮುಂದುವರಿದಿದ್ದು, ಕೆಲವೆಡೆ ರಸ್ತೆಗಳಲ್ಲಿ ನೀರು ನಿಂತು ಸಮಸ್ಯೆಯಾದರೆ, ವಿದ್ಯುತ್ ಸಂಪರ್ಕ ಸ್ಥಗಿತಗೊಂಡು ಜನ ತೊಂದರೆಗೆ ಒಳಗಾದರು. ಅಧಿಕಾರಿಗಳಿಗೆ ಸಂಕಷ್ಟದ ಕುರಿತು ಕರೆ ಮಾಡಿದರೆ ಅಧಿಕಾರಿಗಳು ಕರೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ನಿವಾಸಿಗಳು ಆರೋಪಿಸಿದ್ದಾರೆ. ಬಿಟಿಎಂ ಒಂದನೇ ಹಂತದಲ್ಲಿ ಸಣ್ಣ ಮಳೆಗೂ ಗಂಟೆಗಟ್ಟಲೆ ವಿದ್ಯುತ್ ಸ್ಥಗಿತಗೊಂಡಿದ್ದು, ಮಳೆ ನಿಂತಿದ್ದರೂ ಗಂಟೆಗಟ್ಟಲೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಮಳೆ ಸುರಿದ ಕೆಲವೇ ಗಂಟೆಗಳಲ್ಲಿ ನಗರದ ಹಲವು ರಸ್ತೆಗಳಲ್ಲಿ ನೀರು ನಿಂತಿತ್ತು. ಬೆಳ್ಳಂದೂರು, ಕಾಡುಬೀಸನಹಳ್ಳಿ, ಹೊರವರ್ತುಲ ರಸ್ತೆ ಜಲಾವೃತವಾಗಿತ್ತು. ಇದರಿಂದ ವಾಹನ ಸಂಚಾರ ನಿಧಾನವಾಗಿದ್ದು, ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಟ್ರಾಫಿಕ್ ದಟ್ಟಣೆ ನಿಯಂತ್ರಿಸಿದರು. ರಾತ್ರಿ 11 ರ ಹೊತ್ತಿಗೆ ಸಂಚಾರ ಸಹಜ ಸ್ಥಿತಿಗೆ ಮರಳಿತು.ನಮ್ಮ ಮೆಟ್ರೋಗೂ ಈ ಕುರಿತಂತೆ ಎಚ್ಚರಿಕೆ ನೀಡಲಾಗಿದ್ದು, ನಮ್ಮ ಮೆಟ್ರೋ ಅಧಿಕಾರಿಗಳು ಆಗಮಿಸಿ ನೀರನ್ನು ಹೊರ ಹಾಕಿದ್ದಾರೆ ಎಂದು ಮಹದೇವಪುರ ಕಾರ್ಯಪಡೆ ತಿಳಿಸಿದೆ.

ಸಭೆ/ಸಮಾರಂಭ

ಆರೋಗ್ಯ ತಪಾಸಣಾ ಉಚಿತ ಶಿಬಿರ
ಸ್ಥಳ: ಶ್ರೀ ಆಂಜನೇಯಸ್ವಾಮಿ ದೇವಸ್ಥಾನ , ಪ್ರಮೋದ್ ಬಡಾವಣೆ
ಸಮಯ: ಬೆಳಗ್ಗೆ 9.00 ಗಂಟೆ

ನಿಜ ಇತಿಹಾಸದೊಂದಿಗೆ ಮುಖಾಮುಖಿ ಕೃತಿ ಲೋಕಾರ್ಪಣೆ
ಮುಖ್ಯ ಅತಿಥಿ: ಪಂಪ ಪ್ರಶಸ್ತಿ ಪುರಸ್ಕೃತ ನಾಡೋಜ ಡಾ.ಎಸ್.ಆರ್.ರಾಮಸ್ವಾಮಿ, ಡಾ.ಎಸ್.ಆರ್. ಲೀಲಾ, ವಿಸ್ತಾರ ನ್ಯೂಸ್ ಪ್ರಧಾನ ಸಂಪಾದಕ ಹರಿಪ್ರಕಾಶ್ ಕೋಣೆಮನೆ
ಸ್ಥಳ: ವಾಡಿಯ ಸಭಾಂಗಣ, ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್.
ಸಮಯ: ಬೆಳಗ್ಗೆ 10.00 ಗಂಟೆ.

ಸಂಸ್ಥಾಪನಾ ದಿನಾಚರಣೆ
ಸ್ಥಳ: ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ದ ಆರ್ಟ್
ಸಮಯ: ಬೆಳಗ್ಗೆ 10.00 ಗಂಟೆ.

ಸಾಂಪ್ರದಾಯಿಕ ಪಾತ್ರೆಗಳ ಪ್ರದರ್ಶನ 'ಪಾತ್ರೆ'
ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ.
ಸಮಯ: ಬೆಳಗ್ಗೆ 10.30 ಗಂಟೆ

ರಂಗ ಯುಗಾದಿ
ಸ್ಥಳ: ರಂಗ ಶಂಕರ
ಸಮಯ: ಬೆಳಗ್ಗೆ 11.00ಗಂಟೆ

ಕೈಗೆ ಬಂದ ತುತ್ತು ಅನಾವರಣ
ಮುಖ್ಯ ಅತಿಥಿ: ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಕಸಾಪ ನಿಕಟಪೂರ್ವ ಅಧ್ಯಕ್ಷ ನಾಡೋಜ ಡಾ.ಮನು ಬಳಿಗಾರ್.
ಸ್ಥಳ: ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು
ಸಮಯ: ಬೆಳಗ್ಗೆ 11.00 ಗಂಟೆ

ಮತ್ತೆ ಕಲ್ಯಾಣದೆಡೆಗೆ ಕೃತಿ ಬಿಡುಗಡೆ
ಮುಖ್ಯ ಅತಿಥಿ: ಸಾಹಿತಿ ಡಾ.ಪಿ.ವಿ.ನಾರಾಯಣ, ವಚನಕಾರ ವೀರಪ್ಪ ಮರಳವಾಡಿ, ಅಂಕಿತ ಪುಸ್ತಕ ಪ್ರಕಾಶಕ ಪ್ರಕಾಶ್ ಕಂಬತ್ತಹಳ್ಳಿ.
ಸ್ಥಳ: ನಯನ ಸಭಾಂಗಣ, ಜೆ ಸಿ ರಸ್ತೆ
ಸಮಯ: ಬೆಳಗ್ಗೆ 11.45 ಗಂಟೆ.

ಶಿವರಾಮ ಕಾರಂತ ವೇದಿಕೆಯಿಂದ ಮಹಿಳಾ ದಿನಾಚರಣೆ, ನೆಲಮುಗಿಲಿನ ಮಾತು
ಕವಿಗಳ ಹನಿಮಾತು: ಲಲಿತಾ ಹೊಸಪ್ಯಾಟಿ, ಪಿ. ಚಂದ್ರಿಕಾ, ವಸುಂದರಾ ಕದಲೂರು, ಪೂರ್ಣಿಮಾ ಮಾಳಗಿಮನಿ, ಅಮೃತಾ ಮೆಹಂದಳೆ. ಹಿರಿ ಕವಿಯ ಹಿರಿಮಾತು: ಲಲಿತಾ ಸಿದ್ದಬಸವಯ್ಯ.
ಸ್ಥಳ: ಶ್ರೀ ವಿನಾಯಕ ದೇವಾಲಯ ಸಭಾಂಗಣ, ಆರ್.ಟಿ.ನಗರ.
ಸಮಯ: ಸಂಜೆ 4.00 ಗಂಟೆ.

ರವಿ ಬೆಳಗೆರೆ ಎಂದೂ ಮರೆಯದ ಹಾಡು
ಸ್ಥಳ: ಪತ್ತಿ ಸಭಾಂಗಣ, ಎನ್.ಆರ್.ಕಾಲೋನಿ.
ಸಮಯ: ಸಂಜೆ 5.30 ಗಂಟೆ.

ಶ್ರೀರಾಮನವಮಿ ಆಚರಣೆ ದಾಸವಾಣಿ
ಸ್ಥಳ: ಶ್ರೀ ವಾದಿರಾಜ ಕಲಾ ಭವನ, ಅಕ್ಷಯನಗರ, ಬನ್ನೇರುಘಟ್ಟ,
ಸಮಯ: ಸಂಜೆ 5.30ಗಂಟೆ.

ಚೋರಪುರಾಣ ನಾಟಕ
ಸ್ಥಳ: ಕೆ.ಎಚ್.ಕಲಾಸೌಧ
ಸಮಯ: ಸಂಜೆ 7.30 ಗಂಟೆ

ವಿಶ್ವವಾಣಿ ಕ್ಲಬ್‌ಹೌಸ್‌ನ ಗೆಳೆಯರ ಬೇಂದ್ರ ಮಾಸ್ತರದಲ್ಲಿ ಡಾ.ಶಾಮಸುಂದರ ಬಿದರಕುಂದಿ ಮಾತು

ದ.ರಾ.ಬೇಂದ್ರೆ ಕನ್ನಡ ಸಾಹಿತ್ಯದ ವಿರಾಟ್ ರೂಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಶ್ವವಾಣಿ Clubhouse ಸಂವಾದ-543

ನಾನೊಬ್ಬ ಕವಿ, ನನಗೆ ಬೇಕು ಎಂದು ಕವಿ ಎಂದು ದ.ರಾ.ಬೇಂದ್ರೆಯವರು ಹೇಳುತ್ತಿದ್ದರು. ಅವರು ಬರೆಯುವ ಪ್ರತಿ ಕವನವನ್ನು ಅವರ ಬಾಯಿಯಿಂದಲೇ ಕೇಳಲು, ಚರ್ಚಿಸಲು, ಹರಟಲು ಅವರಿಗೆ ಒಂದು ಗುಂಪು ಬೇಕಿತ್ತು. ಹೀಗಾಗಿ 1922ರಲ್ಲಿ ಸ್ವಾರ್ಥಕ್ಕಾಗಿ ಗೆಳೆಯರ ಗುಂಪು ಕಟ್ಟಿದರು. ಆದರೆ, ಅದರಿಂದ ಹೆಚ್ಚಾದ ಅವರ ಸಾಹಿತ್ಯ ಕೃಷಿ ಇಂದಿಗೂ ಕನ್ನಡಿಗರನ್ನು ರಂಜಿಸುತ್ತಿದೆ. ಅವರು ಕನ್ನಡ ಸಾಹಿತ್ಯದ ವಿರಾಟ್ ಸ್ವರೂಪ ಎಂದು ಕವಿ ಮತ್ತು ವಿರ್ಮಶಕ ಶಾಮಸುಂದರ ಬಿದರಕುಂದಿ ಹೇಳಿದ್ದಾರೆ.

ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ 'ಗೆಳೆಯರ ಬೇಂದ್ರೆ ಮಾಸ್ತರ' ವಿಷಯ ಕುರಿತು ಅವರು ಹೇಳಿದ್ದು ಹೀಗೆ:

ಬೇಂದ್ರೆಯವರು ಬಿಎ ಓದುವ ಸಂದರ್ಭದಲ್ಲಿ ಅನೇಕ ಕವಿ, ಅಧ್ಯಾಪಕರ ಮತ್ತು ಪಂಡಿತರ ಸಹಾವಾಸದ ಸಲುವಾಗಿ ಮರಾಠಿಯಲ್ಲಿ ಮೊಟ್ಟ ಮೊದಲ ಕವಿತೆ ಬರೆದರು. ಈ ಕಾವ್ಯದ ಮೂಲಕ ಮರಾಠಿಗರಲ್ಲಿ ಮೆಚ್ಚುಗೆಗೆ ಪಾತ್ರವಾದರು. ಓದುವ ಸಂದರ್ಭದಲ್ಲಿ ಇದು ಅವರಿಗೆ ಸಹಾಯ ವಾಯಿತು. ಓದು ಮುಗಿದ ಬಳಿಕ ಅನೇಕ ಮರಾಠಿ ಗರು ಬೇಂದ್ರೆಯವರನ್ನು ಪುಣೆಯಲ್ಲೇ ಇರಬೇಕು ಎಂದು ಕೋರಿದ್ದರು. ಆದರೆ, ಅವರು ಮಾತ್ರ, ನಾನು ಹುಟ್ಟು ಕನ್ನಡಿಗ. ನನ್ನ ತಾಯಿ ಕನ್ನಡತಿ ಮತ್ತು ನನ್ನ ಊರು ಧಾರವಾಡ. ಕನ್ನಡ ನಾಡನ್ನು ಬಿಟ್ಟು ಬರಲಾಗುವುದಿಲ್ಲ ಎಂದು ಹೇಳಿದರು. ಅವರು ಧಾರವಾಡಕ್ಕೆ ಬಂದಮೇಲೆ ಮೊದಲ ಕನ್ನಡ ಕವಿತೆ 'ತುತ್ತೂರಿ' ಯನ್ನು ಬರೆದರು. ಈ ಕವಿತೆಯಲ್ಲಿ ಕನ್ನಡ ಭಾಷಾ ಹಿರಿಮೆಯನ್ನು ಸಾರಿ ಹೇಳಿದರು.



ಮನುಷ್ಯ ಬದುಕಲು ಶಾಂತಿ ಮತ್ತು ಜ್ಞಾನಬೇಕು. ಅದನ್ನು ಯಾರು ಒದಗಿಸಬೇಕು? ಕವಿಗಳು, ಸಾಹಿತಗಳು ನೀಡಬೇಕು ಎಂದು ಬೇಂದ್ರೆ ತಿಳಿದಿದ್ದರು. ಅಷ್ಟೇ ಅಲ್ಲ, ಕಾವ್ಯ ಮತ್ತು ಕವಿತೆಗಳು ಜನರಿಗೆ ಸರಳ ಮಾದರಿಯಲ್ಲಿ ಅರ್ಥವಾಗಬೇಕು. ಆಗ ಅವರಲ್ಲಿ ಓದುವ ಪ್ರೇರಣೆ ಮೂಡಿಸಬಹುದು ಎಂದು ಭಾವಿಸಿದ್ದರು. ಅದಕ್ಕೆ ತಕ್ಕಂತೆ ಕೃತಿಗಳನ್ನು ರಚಿಸಿದರು.

1922ರಲ್ಲಿ ಗೆಳೆಯರ ಗುಂಪನ್ನು ಕಟ್ಟಿದರು. ಆ ಗುಂಪಿನಲ್ಲಿ ತಮ್ಮ ಕವಿತೆ ಸಾಲುಗಳನ್ನು ಅರ್ಥ ಪೂರ್ಣವಾಗಿ ಚರ್ಚೆ ಮಾಡುತ್ತಾ ಹರಟುತ್ತಾ ಸಮಯ ಕಳೆಯುತ್ತಿದ್ದರು. ಆರಂಭದಲ್ಲಿ ಕವಿಗೋಷ್ಠಿಯನ್ನು ಆಯೋಜನೆ ಮಾಡಿದ್ದರು. ಅವರ ರಚನೆಯಲ್ಲಿ ಮೂಡಿ ಬಂದ ಎರಡು ಕವಿತೆಗಳನ್ನು ವಚಿಸಿದರು. ಈ ಕವಿತೆಗಳು ಸಹ ಕನ್ನಡ ಕಂಪನ್ನು ಪಸರಿಸಿತ್ತು.

ಹೊಸಗನ್ನಡ ಸಾಹಿತ್ಯ ರಚಿಸುವ ಹಂಬಲ: ಕನ್ನಡದಲ್ಲಿ ಹಳೆಗನ್ನಡ ಸಾಹಿತ್ಯ ಮತ್ತು ಸಂಪ್ರದಾಯಗಳಲ್ಲಿ ಸಂಸ್ಕೃತ ಬಂದಿದೆ. ಆದರೆ, ಹೊಸ ಗನ್ನಡ ಸಾಹಿತ್ಯವನ್ನು ರಚಿಸುವ ಹಂಬಲವನ್ನು ಬೇಂದ್ರೆ ಹೊಂದಿದ್ದರು. ನನಗೆ ಆಗಿರುವ ಜ್ಞಾನೋದಯ ಕನ್ನಡ ಸಾಹಿತ್ಯಕ್ಕೆ ಮತ್ತು ಕನ್ನಡ ಜನತೆಗೆ ಆಗಬೇಕು. ಆದು ಸೃಜನಶೀಲ ಬರವಣಿಗೆಯಿಂದ ಆಗಬೇಕು. ಹೊಸಗನ್ನಡ ಸಾಹಿತ್ಯದಲ್ಲಿ ಆಂಗ್ಲ ಪರಿಕಲ್ಪನೆ ಒಳಗೊಂಡ ಚಿಂತನೆಗಳನ್ನು ಜನರಿಗೆ ತಿಳಿಸಬೇಕು. ಆಗ ಕನ್ನಡ ಸಾಹಿತ್ಯ ಅಂತಾರಾಷ್ಟ್ರೀಯ ಮಟ್ಟವನ್ನು ತಲುಪುತ್ತದೆ ಎಂಬುದು ಬೇಂದ್ರೆಯ ಅಭಿಮತವಾಗಿತ್ತು. ಗೆಳೆಯರ ಗುಂಪಿನ ಮೂಲಕ ಯುವ ಪೀಳಿಗೆ, ಸಾಹಿತ್ಯ ಆಸಕ್ತರು ಮತ್ತು ಆಕಾಂಕ್ಷಿಗಳಿಂದ ಇದು ಸಾಧ್ಯ ಎಂದು ಭಾವಿಸಿದರು.

ಕನ್ನಡ ಸಾಹಿತ್ಯವನ್ನು ಕಟ್ಟಲು ಬೇಂದ್ರೆ ಕನ್ನಡ ಸಾಹಿತ್ಯ ಭೂಮಿಯಲ್ಲಿ ದೊಡ್ಡ ಕೃಷಿ ಮಾಡಿದರು. ಪ್ರತಿ ವಿಷಯದಲೂ ಕನ್ನಡ ಮತ್ತು ಆಧುನಿಕ ಸಾಹಿತ್ಯ ಕಟ್ಟಲು ಅವರ ಅನುಭವಗಳನ್ನು ಮತ್ತು ಚಿಂತನೆಗಳನ್ನು ಧಾರೆಯೆದರು. ಬೇಂದ್ರೆ ಕನ್ನಡ ಸಾಹಿತ್ಯದ ವಿರಾಟ್ ಸ್ವರೂಪ ಎಂದರು.

ಅಕ್ಷರ ಸ್ಫೂರ್ತಿ

- ಬೇಂದ್ರೆ ಜೈ ಕರ್ನಾಟಕ ದಿನ ಪತ್ರಿಕೆಯ ಸಂಪಾದಕರಾದ ನಂತರ, ಶಂಬಾ ಜೋಶಿ ಅವರ ಸಹಕಾರದೊಂದಿಗೆ ಕನ್ನಡದ ಮೊದಲ ಕವನ ಸಂಕಲನ ಹೊರತಂದರು. ಇದರಲ್ಲಿ ಕನ್ನಡ ಹಿರಿಮೆ ಮತ್ತು ಗೌರವ ಹೆಚ್ಚಿಸುವ ಕವನಗಳಿದ್ದವು.
- ಜೈ ಕರ್ನಾಟಕ ಪತ್ರಿಕೆಯಲ್ಲಿ ಕವಿತೆಗಳು, ಜನಪದ ಸಾಹಿತ್ಯ ಮತ್ತು ಸೃಜನಶೀಲ ಲೇಖನ ಪ್ರಕಟವಾಗುತಿತ್ತು.
- ಹೊಸಗನ್ನಡವನ್ನು ಬೆಳೆಸುವ ವಿಚಾರ ಚಿಂತನೆ, ಕತೆ, ಸಂಪಾದಕೀಯಗಳನ್ನು ಬೇಂದ್ರೆ ಮತ್ತಿತರು ಬರೆದು ಜನರಿಗೆ ತಿಳಿಸುತ್ತಿದ್ದರು.

ದೇಹ ತುಂಡು ತುಂಡಾಗಿಸಿದ್ದ ಪ್ರಕರಣ 8 ವರ್ಷದ ಬಳಿಕ ಆರೋಪಿಗಳ ಬಂಧನ

ಬೆಂಗಳೂರು: ತನ್ನ ಅನೈತಿಕ ಸಂಬಂಧಕ್ಕೆ ಅಡ್ಡಿಯಾದ ಸಹೋದರನನ್ನು ಪ್ರಿಯಕರನೊಂದಿಗೆ ಸೇರಿ ಕೊಲೆ ಮಾಡಿ ದೇಹವನ್ನು ಅನೇಕ ತುಂಡುಗಳಾಗಿ ಕತ್ತರಿಸಿ ಎಸೆದು 8 ವರ್ಷದಿಂದ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಜಿಗಣಿ ಪೊಲೀಸರು ಬಂಧಿಸಿದ್ದಾರೆ. ಜಿಗಣಿ ಠಾಣೆಯಲ್ಲಿ 'ಸಿ' ರಿಪೋರ್ಟ್ ಆಗಿದ್ದ ಪ್ರಕರಣದ ಆರೋಪಿಗಳನ್ನು ಮಹಾರಾಷ್ಟ್ರದ ನಾಸಿಕ್‌ನಲ್ಲಿ ಪೊಲೀಸರು ಬಂಧಿಸಿದ್ದು, ಭಾಗ್ಯಶ್ರೀ ಸಾಸಬಾಳು ಮತ್ತು ಸುಪುತ್ರ ಶೇಖರಪ್ಪ ತಳವಾರ್ ಬಂಧಿತರು. ಇವರು ಎಂಟು ವರ್ಷಗಳ ಹಿಂದೆ ಭಾಗ್ಯಶ್ರೀ ಸಹೋದರ ನಿಂಗರಾಜು ಎಂಬಾತನನ್ನು ಕೊಲೆಗೈದು ಪರಾರಿ ಯಾಗಿದ್ದರು.

ಸುಪುತ್ರ ಶೇಖರಪ್ಪ ಮತ್ತು ಭಾಗ್ಯಶ್ರೀ ಸಾಸಬಾಳು ವಿಜಯಪುರದ ಮೂಲದವರು. ಜಿಗಣಿಯ ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸುಪುತ್ರ ಶೇಖರಪ್ಪ ಮದುವೆಯಾಗಿ ತನ್ನ ಪತ್ನಿಯನ್ನು ಶಂಕರಪ್ಪ ತಳವಾರ ಎಂಬಾತನಿಗೆ ಬಿಟ್ಟುಕೊಟ್ಟು ಭಾಗ್ಯಶ್ರೀ ಜತೆ ಅನೈತಿಕ ಸಂಬಂಧ ಹೊಂದಿದ್ದ. ಜಿಗಣಿಯಲ್ಲಿ ವಾಸವಾಗಿದ್ದ ತನ್ನ ಸಹೋದರಿಯನ್ನು ನೋಡಲು ಬಂದಿದ್ದ ನಿಂಗರಾಜುಗೆ ತನ್ನ ಅಕ್ಕ ಶೇಖರ್ ಜತೆ ವಾಸವಿದ್ದು, ಅನೈತಿಕ ಸಂಬಂಧ ಹೊಂದಿರುವುದು ಗೊತ್ತಾಗಿದೆ. ಈ ವಿಚಾರದಲ್ಲಿ ಅಕ್ಕನ ಜತೆ ಗಲಾಟೆ ಮಾಡಿಕೊಂಡಿದ್ದ. ಇದರಿಂದ ಕೋಪಗೊಂಡ ಭಾಗ್ಯಶ್ರೀ ತನ್ನ ಪ್ರಿಯಕರ ಸುಪುತ್ರ ಶೇಖರಪ್ಪ ತಳವಾರ್ ಜತೆ ಸೇರಿ ನಿಂಗರಾಜುವನ್ನು ಕೊಲೆಗೈದು ಬಳಿಕ ದೇಹವನ್ನು ಹಲವು ತುಂಡುಗಳಾಗಿ ಮಾಡಿ ಹಲವು ಸ್ಥಳಗಳಲ್ಲಿ ಎಸೆದಿದ್ದರು ಎಂದು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡೆ ಮಾಹಿತಿ ನೀಡಿದ್ದಾರೆ.

ಪಕ್ಷಗಳ ಕಾರ್ಯಕರ್ತರ ಮಾರಾಮಾರಿ: ಎಫ್‌ಐಆರ್

ಫ್ಲೆಕ್ಸ್ ಹಾಕುವ ವಿಚಾರವಾಗಿ ಕಾಂಗ್ರೆಸ್- ಬಿಜೆಪಿ ಕಾರ್ಯಕರ್ತರ ಮಧ್ಯೆ ನಡೆದ ಮಾರಾಮಾರಿ ಸಂಬಂಧ ಗೋವಿಂದ ರಾಜ ನಗರ ಠಾಣೆಯಲ್ಲಿ ಒಟ್ಟು ಮೂರು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ಘಟನೆಯ ಕುರಿತು ಪೊಲೀಸರೇ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಲ್ಲದೆ, ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ನೀಡಿರುವ ದೂರು-ಪ್ರತಿದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿರುವ ಆರೋಪದ ಮೇಲೆ 36 ಜನರ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ. ಇದಲ್ಲದೇ ಕಾಂಗ್ರೆಸ್ ಕಾರ್ಯಕರ್ತೆ ನೀಡಿರುವ ದೂರಿನ ಅನ್ವಯ 10 ಮಂದಿ ಬಿಜೆಪಿ ಕಾರ್ಯಕರ್ತರ ವಿರುದ್ಧ ಹಲ್ಲೆ ಹಾಗೂ ಕೊಲೆ ಬೆದರಿಕೆ ಪ್ರಕರಣ ದಾಖಲಾಗಿದೆ. ಪ್ರತಿಯಾಗಿ ಬಿಜೆಪಿ ಕಾರ್ಯಕರ್ತೆ ಸಹ ದೂರು ನೀಡಿದ್ದು, ಅದರನ್ವಯ 8 ಜನರ ವಿರುದ್ಧ ಹಲ್ಲೆ, ಕೊಲೆ ಬೆದರಿಕೆ ಪ್ರಕರಣ ದಾಖಲಾಗಿದೆ.

ನಕಲಿ ಐಪಿಎಸ್ ಅಧಿಕಾರಿ ಬಂಧನ

ಐಪಿಎಸ್ ಅಧಿಕಾರಿ ಎಂದು ಪೊಲೀಸ್ ಅಧಿಕಾರಿಯ ಸಮವಸ್ತ್ರ ಧರಿಸಿ, ನಕಲಿ ಪಿಸ್ತೂಲು, ವಾಕಿಟಾಕಿ ಇಟ್ಟುಕೊಂಡು ಸಾರ್ವಜನಿಕರಿಂದ ಹಣ ಪಡೆದು ವಂಚಿಸುತ್ತಿದ್ದ ನಕಲಿ ಐಪಿಎಸ್ ಅಧಿಕಾರಿಯೊಬ್ಬನನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಂದ್ರಲೇಔಟ್‌ನ ಮಾರುತಿನಗರದ ನೇತ್ರಾವತಿ ರಸ್ತೆಯ 5ನೇ ಕ್ರಾಸ್ ನಿವಾಸಿ ಶ್ರೀನಿವಾಸ (34) ಬಂಧಿತ ನಕಲಿ ಅಧಿಕಾರಿ. ಈತನಿಂದ 36.20 ಲಕ್ಷ ನಗದು ಹಾಗೂ 54 ಲಕ್ಷ ರು ಮೌಲ್ಯದ ಕಾರು, ದುಬಾರಿ ಬೆಲೆಯ ಮೊಬೈಲ್ ಫೋನ್ ಮತ್ತು ಬಿಎಂಡಬ್ಲ್ಯು ಬೈಕ್ ಸೇರಿದಂತೆ 4 ಬೈಕ್, ನಕಲಿ ಪಿಸ್ತೂಲು, ಲ್ಯಾಪ್‌ಟಾಪ್, 4 ವಾಕಿಟಾಕಿಗಳು ಹಾಗೂ ನಕಲಿ ಗುರುತಿನ ಕಾರ್ಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಡಿಪ್ಲೋಮೊ ಇನ್ ಕಂಪ್ಯೂಟರ್ ಸೈನ್ಸ್ ವ್ಯಾಸಂಗವನ್ನು ಅರ್ಧಕ್ಕೆ ಮೊಟಕುಗೊಳಿಸಿ ಐಷರಾಮಿ ಜೀವನಕ್ಕೆ ಮಾರು ಹೋಗಿದ್ದ ಶ್ರೀನಿವಾಸ, 2010ರಲ್ಲಿ ಎರಡು ಕಾರುಗಳನ್ನು ಕಳ್ಳತನ ಮಾಡಿದ್ದ ಬಗ್ಗೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಪ್ರಕರಣದಲ್ಲಿ ಜೈಲಿಗೂ ಹೋಗಿ ಬಂದಿದ್ದ. ನಂತರ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಬಿಸಿಎ ವ್ಯಾಸಂಗ ಮಾಡಿ ಬನ್ನೇರುಘಟ್ಟದ ಬೇಗೂರುಕೊಪ್ಪದ ಹುಲ್ಲಹಳ್ಳಿ ಬಳಿ ಇರುವ ಶಾಲೆಯೊಂದರಲ್ಲಿ ಗ್ರಾಫಿಕ್ ಡಿಸೈನರ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದ. ಅದೇ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ರಮ್ಯಾ ಎಂಬುವವರನ್ನು ಪರಿಚಯಿಸಿಕೊಂಡಿದ್ದ ಶ್ರೀನಿವಾಸ್, ತಾನು ಐಪಿಎಸ್ ಅಧಿಕಾರಿ. ನಿನ್ನನ್ನು ಮದುವೆಯಾಗುತ್ತೇನೆ ಎಂದು ಆಕೆಯ ಜತೆ ಸುತ್ತಾಡಿ ವಂಚಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ. ಶೋಕಿ ಮಾಡಲು ಹಾಗೂ ಐಷರಾಮಿ ಜೀವನ ನಡೆಸಲು ಐಪಿಎಸ್ ಅಧಿಕಾರಿ ವೇಷ ಧರಿಸುತ್ತಿದ್ದ ಶ್ರೀನಿವಾಸ್ ಹಲವರಿಗೆ ವಂಚಿಸಿದ್ದ ಎಂದು ತಿಳಿಸಿದ್ದಾರೆ.

ಸ್ನೇಹಿತರೊಬ್ಬರಿಂದ ಪರಿಚಯವಾದ ಶ್ರೀನಿವಾಸ್ ತಾನು ಪೊಲೀಸ್ ಅಧಿಕಾರಿ ಎಂದು ನಂಬಿಸಿ ಸ್ನೇಹಿತರಿಂದ 2.25 ಕೋಟಿ ರು. ಪಡೆದು ಆ ಪೈಕಿ 50 ಲಕ್ಷ ರು. ವಾಪಸ್ ಕೊಟ್ಟು ಉಳಿದ 1.75 ಕೋಟಿ ರು. ನೀಡದೆ ವಂಚಿಸಿದ್ದಾನೆ ಎಂದು ವೆಂಕಟನಾರಾಯಣ ಎಂಬುವರು ಪೊಲೀಸರಿಗೆ ದೂರು ನೀಡಿದ್ದರು. ಈ ದೂರಿನ ಆಧಾರದಲ್ಲಿ ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಆತನ ಕೃತ್ಯಗಳು ಬೆಳಕಿಗೆ ಬಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೂಕದ ಸ್ಕೇಲ್‌ನಲ್ಲಿ ಗೋಲ್‌ಮಾಲ್: ಬಂಧನ

ತೂಕದ ಸ್ಕೇಲ್‌ನಲ್ಲಿ ಚಿಪ್ ಅಳವಡಿಸಿ ಗ್ರಾಹಕರಿಗೆ ವಂಚಿಸುತ್ತಿದ್ದವರ ವಿರುದ್ಧ ಕಾರ್ಯಾಚರಣೆ ಕೈಗೊಂಡ ಕಾಮಾಕ್ಷಿಪಾಳ್ಯ ಠಾಣಾ ಪೊಲೀಸರು ಹದಿನೇಳು ಜನ ಆರೋಪಿಗಳನ್ನು ಬಂಧಿಸಿದ್ದಾರೆ. ನ್ಯಾಯಬೆಲೆ ಅಂಗಡಿ, ಗುಜರಿ ಅಂಗಡಿ, ಕೋಳಿ ಮೀನು ಮಾಂಸ ಮಾರಾಟ ಅಂಗಡಿಗಳಲ್ಲಿ ಗ್ರಾಹಕರಿಗೆ ವಂಚಿಸುತ್ತಿದ್ದ ಸೋಮಶೇಖರ್, ನವೀನ್ ಕುಮಾರ್, ವಿನೇಶ್ ಪಟೇಲ್, ರಾಜೇಶ್ ಕುಮಾರ್, ವ್ಯಾಟರಾಯನ್, ಮೇಘನಾಥಮ್, ಲೋಕೇಶ್ ಕೆ., ಲೋಕೇಶ್ ಎಸ್.ಆರ್,, ಗಂಗಾಧರ್, ಚಂದ್ರಶೇಖರಯ್ಯ, ಅನಂತಯ್ಯ, ರಂಗನಾಥ್, ಶಿವಣ್ಣ, ಸನಾವುಲ್ಲಾ, ವಿಶ್ವನಾಥ್, ಮಹಮದ್ ಈಶಾಕ್, ಹಾಗೂ ಮಧುಸೂಧನ್ ಬಂಧಿತರು. ಮಾಪನ ಶಾಸ್ತ್ರ ಇಲಾಖೆಯಿಂದ ಪರವಾನಗಿ ಪಡೆದು ಸ್ಕೇಲ್ ಸರ್ವಿಸ್ ಮಾಡುವ ಕೆಲಸ ಮಾಡುತ್ತಿದ್ದ ಸೋಮಶೇಖರ್ ಮತ್ತು ನವೀನ್ ಕುಮಾರ್, ಯೂಟ್ಯೂಬ್ ನೋಡಿ ತೂಕದ ಯಂತ್ರದಲ್ಲಿ ವೈರ್ ಬದಲಾವಣೆ ಮಾಡುವುದನ್ನು ಕಲಿತಿದ್ದರು. ಅದರಂತೆ ತೂಕದ ಯಂತ್ರದಲ್ಲಿನ ಪಿಸಿಬಿ (ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್) ಚಿಪ್‌ನಲ್ಲಿ ಬದಲಾವಣೆ ಮಾಡಿ ಸ್ಕೇಲ್‌ನಲ್ಲಿ ಹೆಚ್ಚುವರಿ ಬಟನ್ ಹಾಗೂ ರಿಮೋಟ್ ಅಳವಡಿಸುತ್ತಿದ್ದರು. ಇದೇ ರೀತಿ ಎರಡ್ಮೂರು ವರ್ಷಗಳಿಂದ ತೂಕದ ಸ್ಕೇಲ್‌ನಲ್ಲಿ ಮಾರ್ಪಾಡು ಮಾಡಿ ಗ್ರಾಹಕರಿಗೆ ವಂಚಿಸುತ್ತಿದ್ದರು. ಇಬ್ಬರು ಗ್ರಾಹಕರಿಂದ ಬಂದ ಮಾಹಿತಿ ಮೇರೆಗೆ ವಿಶೇಷ ತಂಡ ರಚಿಸಿಕೊಂಡು ಕಾರ್ಯಾಚರಣೆ ಕೈಗೊಂಡ ಕಾಮಾಕ್ಷಿಪಾಳ್ಯ ಠಾಣಾ ಪೊಲೀಸರು ವಿವಿಧ ಅಂಗಡಿಗಳಲ್ಲಿ ಪರಿಶೀಲನೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಜಾಗತಿಕ ಮಟ್ಟದ ವಿಜ್ಞಾನ ಗ್ಯಾಲರಿ ಲೋಕಾರ್ಪಣೆ



'ವಿಜ್ಞಾನ ಗ್ಯಾಲರಿ ಬೆಂಗಳೂರು' ಸಂಕೀರ್ಣವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು. ಸಚಿವ ಡಾ.ಸಿ ಎನ್.ಅಶ್ವತ್ಥನಾರಾಯಣ, ಉದ್ಯಮಿ ಕಿರಣ್ ಮಜುಂದಾರ್ ಷಾ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ ಇದ್ದರು.

ಸೈನ್ಸ್ ಗ್ಯಾಲರಿಯ ವಿಶೇಷಗಳು

ಸೈನ್ಸ್ ಗ್ಯಾಲರಿ ಬೆಂಗಳೂರು 'ಪಬ್ಲಿಕ್ ಲ್ಯಾಬ್' ಪರಿಕಲ್ಪನೆ ಅಳವಡಿಸಿಕೊಂಡಿರುವ ಏಕೈಕ ಸಂಸ್ಥೆಯಾಗಿದ್ದು, ಇಲ್ಲಿ ಬ್ಲ್ಯಾಕ್ ಬಾಕ್ಸ್ ಥಿಯೇಟರ್, ಫುಡ್ ಲ್ಯಾಬ್, ಹ್ಯುಮಾನಿಟೀಸ್, ಮೆಟೀರಿಯಲ್ಸ್, ನೇಚರ್, ನ್ಯೂ ಮೀಡಿಯಾ ಮತ್ತು ಥಿಯರಿ ಹೀಗೆ 7 ಪ್ರಯೋಗಾಲಯಗಳಿವೆ. ಇಲ್ಲಿ ಆಸಕ್ತರು ಆಯಾಯ ಕ್ಷೇತ್ರಗಳಿಗೆ ಸಂಬಂಧಪಟ್ಟ ಸಂಶೋಧನೆಗಳನ್ನು ಕೈಗೊಳ್ಳಬಹುದು. ಗ್ಯಾಲರಿಯು ತನ್ನ 'ಮೀಡಿಯೇಟರ್ ಪ್ರೋಗ್ರಾಂ' ಅಡಿಯಲ್ಲಿ ಈಗಾಗಲೇ 100ಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದೆ. ಜಾನ್ ಇನ್ನ್ ಸೆಂಟರ್, ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ, ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ, ಸ್ಮಿತ್ಸೋನಿಯನ್ ತರಹದ 25ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಸಂಸ್ಥೆಗಳೊಂದಿಗೆ ಎಸ್‌ಜಿಬಿ ಕೈಜೋಡಿಸಿದೆ.

ಬೆಂಗಳೂರು: ಯುವಜನರು ವಿಜ್ಞಾನದ ಬಗ್ಗೆ ಹೆಚ್ಚುಹೆಚ್ಚಾಗಿ ಆಸಕ್ತಿ ಬೆಳೆಸಿಕೊಳ್ಳುವಂತೆ ಮಾಡುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರವು ರೂಪಿಸಿರುವ 'ವಿಜ್ಞಾನ ಗ್ಯಾಲರಿ ಬೆಂಗಳೂರು' ಸಂಕೀರ್ಣವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಲೋಕಾರ್ಪಣೆ ಮಾಡಿದರು. ಬಳಿಕ ಮಾತನಾಡಿ, ಇಂದು ಶಿಕ್ಷಣ ಮತ್ತು ಉದ್ಯೋಗ ರಂಗಗಳಲ್ಲಿ ತಂತ್ರ ಜ್ಞಾನದ ಪಾರಮ್ಯವಿದೆ. ಆದರೆ, ಮೂಲವಿಜ್ಞಾನ ಹಿಂದಕ್ಕೆ ಸರಿಯುತ್ತಿದೆ. ವಾಸ್ತವವಾಗಿ, ಮೂಲವಿಜ್ಞಾನ ಮತ್ತು ಸಂಶೋಧನೆಗಳು ನಮ್ಮ ಬದುಕಿನ ಮತ್ತು ಚಿಂತನೆಯ ಭಾಗ ವಾಗಬೇಕು. ಕರ್ನಾಟಕವು ಸಂಶೋಧನೆ ಮತ್ತು ಅಭಿವೃದ್ಧಿ (ಆರ್‌ಡಿ) ನೀತಿ ರೂಪಿಸಿದ ಮೊಟ್ಟಮೊದಲ ರಾಜ್ಯವಾಗಿದೆ ಎಂದರು. ಇದನ್ನು ಮನಗಂಡು ರಾಜ್ಯ ಸರಕಾರವು ಈ ವಿಜ್ಞಾನ ಗ್ಯಾಲರಿ ಸ್ಥಾಪಿಸಿದ್ದು, ಇದು ಇಂತಹುದೇ ಉದ್ದೇಶದ ಜಾಗತಿಕ ಸ್ತರದ ಕಾರ್ಯಜಾಲದ ಭಾಗವಾಗಿ ಕೆಲಸ ಮಾಡಲಿದೆ. ಮುಖ್ಯವಾಗಿ ಪಬ್ಲಿಕ್ ಲ್ಯಾಬ್, ಸಾಮುದಾಯಿಕ ಪಾಲ್ಗೊಳ್ಳುವಿಕೆ, ಪ್ರೋತ್ಸಾಹ ಉಪಕ್ರ ಮಗಳು ಮತ್ತಿತರ ಚಟುವಟಿಕೆಗಳ ಮೂಲಕ 15ರಿಂದ 28 ವರ್ಷದೊಳಗಿನ ಯುವಜನರನ್ನು ಸೆಳೆಯಲಿದೆ. ಜೊತೆಗೆ ಇದು ಸಾರ್ವಜನಿಕರಿಗೂ ಮುಕ್ತವಾಗಿರಲಿದೆ ಎಂದರು. ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, 1.40 ಲಕ್ಷ ಚದರ ಅಡಿಗಳಷ್ಟು ವಿಸ್ತಾರದ ಈ ಗ್ಯಾಲರಿಯು ಅಟ್ಲಾಂಟಾದ ಎಮೋರಿ ಯೂನಿವರ್ಸಿಟಿ, ಬರ್ಲಿನ್‌ನ ಟೆಕ್ನಿಶ್ ಯೂನಿವರ್ಸಿಟಿ, ಡಬ್ಲಿನ್‌ನ ಟ್ರಿನಿಟಿ ಕಾಲೇಜು, ಲಂಡನ್‌ನ ಕಿಂಗ್ಸ್ ಕಾಲೇಜ್, ಅಮೆರಿಕದ ಮೆಲ್ಬೋರ್ನ್ ಯೂನಿವರ್ಸಿಟಿ ಇರುವ ಜಾಗತಿಕ ವಿಜ್ಞಾನ ಗ್ಯಾಲರಿಗಳ ಜಾಲದ ಭಾಗವಾಗಿ ಇರಲಿದೆ ಎಂದರು.

ವರುಣಾದತ್ತ ಚಿತ್ತ?

← ಮೊದಲಪುಟದಿಂದ

ಏಕ ಅಭ್ಯರ್ಥಿಗಳಿರುವ ಸುಮಾರು 100 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಶುಕ್ರವಾರದ ಚುನಾವಣಾ ಸಮಿತಿ ಸಭೆಯಲ್ಲಿ ಅಂತಿಮಗೊಳಿಸಿದ್ದರೂ ಅದರಿಂದ ಕೋಲಾರ ಮತ್ತು ವರುಣಾ ಕ್ಷೇತ್ರಗಳನ್ನು ಕೈಬಿಟ್ಟಿದ್ದಾರೆ. ಟಿಕೆಟ್‌ಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಸಿದ್ದರಾಮಯ್ಯ ಕ್ಷೇತ್ರ ಆಯ್ಕೆಯನ್ನು ಹೈಕಮಾಂಡ್‌ಗೆ ಬಿಟ್ಟಿದ್ದರೂ ರಾಜ್ಯ ಕಾಂಗ್ರೆಸ್ ಕಳುಹಿಸಿಕೊಟ್ಟಿರುವ ಪಟ್ಟಿಯಲ್ಲಿ ಕೋಲಾರದಿಂದ ಸಿದ್ದರಾಮಯ್ಯ ಮತ್ತು ವರುಣಾದಿಂದ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹೆಸರು ಮಾತ್ರ ಇತ್ತು ಎಂದು ತಿಳಿದುಬಂದಿದೆ.

ಇರುವುದೊಂದೇ ಆಯ್ಕೆ: 2018ರಲ್ಲಿ ಗೆದ್ದಿದ್ದ ಬದಾಮಿ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ಸಿದ್ದರಾಮಯ್ಯ ಈಗಾಗಲೇ ಹೇಳಿದ್ದಾರೆ. ಅಲ್ಲದೆ, ಆ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಬಿ.ಬಿ.ಚಿಮ್ಮನಕಟ್ಟಿ ಮತ್ತೆ ಸಿದ್ದರಾಮಯ್ಯ ಈ ಕ್ಷೇತ್ರದಿಂದ ಸ್ಪರ್ಧಿಸಬಾರದು ಎಂದು ಆಗ್ರಹಿಸಿದ್ದರು. ಹೀಗಾಗಿ ಸದ್ಯದ ಪರಿಸ್ಥಿತಿಯಲ್ಲಿ ವರುಣಾ ಒಂದೇ ಸಿದ್ದರಾಮಯ್ಯ ಅವರಿಗೆ ಸುರಕ್ಷಿತ ಕ್ಷೇತ್ರ ಎಂದು ಕಾಂಗ್ರೆಸ್ ಪರಿಗಣಿಸಿದ್ದು, ಅವರು ಅಲ್ಲಿಂದಲೇ ಕಣಕ್ಕಿಳಿಯುವ ಸಾಧ್ಯತೆ ಇದೆ. ತಂದೆಗಾಗಿ ಕ್ಷೇತ್ರ ತ್ಯಾಗ ಮಾಡಲು ಪುತ್ರ ಯತೀಂದ್ರ ಸಿದ್ದರಾಮಯ್ಯ ಕೂಡ ಮುಂದೆ ಬಂದಿದ್ದಾರೆ.

ಕಳೆದ ಚುನಾವಣೆಯಲ್ಲಿ ಸಿದ್ದರಾಮಯ್ಯ ಚಾಮುಂಡೇಶ್ವರಿ ಮತ್ತು ಬದಾಮಿ ಕ್ಷೇತ್ರದಿಂದ ಸ್ಪರ್ಧಿಸಿದ್ದರಾದರೂ ಚಾಮುಂಡೇಶ್ವರಿಯಲ್ಲಿ ಜೆಡಿಎಸ್‌ನ ಜಿ.ಟಿ.ದೇವೇಗೌಡ ಎದುರು ಸೋಲು ಅನುಭವಿಸಿದ್ದರು. ಚಾಮುಂಡೇಶ್ವರಿಯಲ್ಲಿ ಈ ಬಾರಿಯೂ ಜಿಟಿಡಿ ಕಣಕ್ಕಿಳಿಯುವುದು ಖಚಿತವಾಗಿದೆ. ಹೀಗಾಗಿ ಸಿದ್ದರಾಮಯ್ಯ ವರುಣಾ ಕ್ಷೇತ್ರವನ್ನೇ ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಆಪ್ತರೊಂದಿಗೆ ಸಿದ್ದು ಸಭೆ: ದೆಹಲಿಯಿಂದ ವಾಪಸಾದ ಸಿದ್ದರಾಮಯ್ಯ ಶನಿವಾರ, ತಮ್ಮ ಆಪ್ತರ ಜತೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಭೆ ನಡೆಸಿ ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ. ಸಭೆಯಲ್ಲಿ ಕೋಲಾರ ಉಸ್ತುವಾರಿ ಹೊತ್ತಿರುವ ಎಂ.ಆರ್.ಸೀತಾರಾಮ್, ವಿಧಾನ ಪರಿಷತ್ ಸದಸ್ಯರಾದ ನಸೀರ್ ಅಹ್ಮದ್, ಅನಿಲ್ ಕುಮಾರ್, ಮಾಜಿ ಸಭಾಪತಿ ವಿ. ಆರ್.ಸುದರ್ಶನ್ ಮತ್ತಿತರರು ಇದ್ದರು. ಕೋಲಾರವನ್ನೇ ಆಯ್ಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದ ಅವರು, ಈ ವಿಚಾರದಲ್ಲಿ ತಾವು ಕೂಡ ರಾಹುಲ್‌ಗೆ ಮನವರಿಕೆ ಮಾಡಿಕೊಡುವುದಾಗಿ ಹೇಳಿದ್ದಾರೆ.

ಸಭೆ ಬಳಿಕ ಪ್ರತಿಕ್ರಿಯಿಸಿದ ಸೀತಾರಾಮ್, ಸಿದ್ದರಾಮಯ್ಯ ಅವರನ್ನು ಕೋಲಾರ ಕ್ಷೇತ್ರದಿಂದಲೇ ಸ್ಪರ್ಧಿಸುವಂತೆ ಒತ್ತಾಯಿಸಿದ್ದೇವೆ. ಕಳೆದ ಮೂರ್ನಾಲ್ಕು ತಿಂಗಳಿನಿಂದ ಕಷ್ಟಪಟ್ಟು ಅಖಾಡ ಸಿದ್ಧಪಡಿಸಿದ್ದೇವೆ. 'ನೀವು ನಾಮಪತ್ರ ಸಲ್ಲಿಸಿ ಹೋಗಿ. ಉಳಿದದ್ದನ್ನು ನಾವು ನೋಡಿಕೊಳ್ಳುತ್ತೇವೆ. ಅಲ್ಲಿ ಗೆಲ್ಲಲು ಯಾವುದೇ ಸಮಸ್ಯೆಯಿಲ್ಲ. ಹೀಗಾಗಿ ಮತ್ತೊಮ್ಮೆ ರಾಹುಲ್ ಗಾಂಧಿ ಅವರ ಬಳಿ ಈ ಕುರಿತು ಪ್ರಸ್ತಾಪಿಸಿ' ಎಂದು ಮನವಿ ಮಾಡಿದ್ದೇವೆ. ಅಲ್ಲದೆ, ಮಾ. 20ರಂದು ಬೆಳಗಾವಿಗೆ ಆಗಮಿಸುತ್ತಿರುವ ರಾಹುಲ್ ಅವರನ್ನು ನಾವು ಕೂಡ ಭೇಟಿ ಮಾಡಿ ಈ ಕುರಿತು ಮನವಿ ಮಾಡಲಿದ್ದೇವೆ ಎಂದರು.

ಫ್ಲೂ ಜ್ವರದ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಸೂಚನೆ

ಬೆಂಗಳೂರು: ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಇನ್‌ಫ್ಲೂಯೆಂಜಾ/ಫ್ಲೂ ಜ್ವರದ ಬಗ್ಗೆ ಮುನ್ನೆಚ್ಚರಿಕೆ ವಹಿಸುವ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಲಹೆಗಳನ್ನು ನೀಡಿದೆ.

ಇನ್‌ಫ್ಲೂಯೆಂಜಾ ಚಿಕಿತ್ಸೆಗೆ ಉತ್ತಮ ಆಯ್ಕೆಯಾಗಿರುವ ಒಸಲ್ಟಾಮಿವಿರ್ ಆ್ಯಂಟಿ-ವೈರಲ್ ಔಷಧವನ್ನು ಅಗತ್ಯ ಔಷಧ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಇದು ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವುದಾಗಿ ಇಲಾಖೆ ತಿಳಿಸಿದೆ.

ಕೆಲದಿನಗಳಿಂದ ದೇಶಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಇನ್‌ಫ್ಲೂಯೆಂಜಾ/ಫ್ಲೂ ಜ್ವರ ಪ್ರಕರಣ ವರದಿಯಾಗುತ್ತಿದ್ದು, ರಾಜಸ್ಥಾನ, ಮಹಾರಾಷ್ಟ್ರ ಹಾಗೂ ಗುಜರಾತ್‌ನಲ್ಲಿ ಅತಿ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಐಸಿಎಂಆರ್ ಲ್ಯಾಬ್ ಡೇಟಾ ವಿಶ್ಲೇಷಣೆಯಿಂದ ಕರ್ನಾಟಕದಲ್ಲೂ ಈ ಸೋಂಕು ಪ್ರಕರಣಗಳು ಹೆಚ್ಚಳವಾಗಿರುವುದು ತಿಳಿದು ಬಂದಿದೆ.

ಋತುಮಾನದ ಫ್ಲೂ ಜ್ವರವು ಸಾಂಕ್ರಾಮಿಕ ರೋಗವಾಗಿದ್ದು, ಜ್ವರ ಇರುವ ವ್ಯಕ್ತಿಯ ಕೆಮ್ಮಿದಾಗ ಹಾಗೂ ಸೀನಿದಾಗ ಹೊರಹೊಮ್ಮುವ ತುಂತುರು ಹನಿಗಳ ಸಂಪರ್ಕದಿಂದ ಒಬ್ಬರಿಂದ ಒಬ್ಬರಿಗೆ ಸೋಂಕು ಹರಡುತ್ತದೆ. ಸ್ವಯಂ ನಿಯಂತ್ರಣಕ್ಕೆ ಬರುವ ಈ ಸಾಂಕ್ರಾಮಿಕ ರೋಗವು 5-7ದಿನಗಳ ವರೆಗೆ ಕಾಡಲಿದೆ. ಕಡಿಮೆ ರೋಗಸ್ಥಿತಿ ಹಾಗೂ ಮರಣ ಉಂಟುಮಾಡು ವಂಥದ್ದಾಗಿದೆ. ಕೆಲವರಿಗೆ ಆಸ್ಪತ್ರೆಗೆ ದಾಖಲಾಗಬೇಕಾದ ಅವಶ್ಯಕತೆ ಬರಬಹುದು. ಹಾಗಾಗಿ ಶಿಶುಗಳು, ವಯಸ್ಸಾದವರು, ಹಿರಿಯರು, ಗರ್ಭಿಣಿಯರು, ರೋಗ ನಿರೋಧಕ ಶಕ್ತಿ ಕುಂಠಿತಗೊಂಡವರು, ದೀರ್ಘಕಾಲದವರೆಗೆ ನಿರ್ದಿಷ್ಟವಾಗಿ ಸ್ಟಿರಾಯಿಡ್ ಸೇರಿ ಇತರೆ ಔಷಧ ತೆಗೆದುಕೊಳ್ಳುತ್ತಿರುವವರು ಎಚ್ಚರಿಕೆಯಿಂದ ಇರಬೇಕು ಎಂದು ಇಲಾಖೆ ಸೂಚಿಸಿದೆ.

ಜ್ವರ, ಚಳಿ, ದೇಹಾಲಸ್ಯ, ಹಸಿವಾಗದಿರುವಿಕೆ, ಮೈ-ಕೈನೋವು, ವಾಕರಿಕೆ, ಸೀನುವಿಕೆ, ಬಹುದಿನಗಳ ಒಣಕೆಮ್ಮು ಹಾಗೂ ಹಠಾತ್ ಅಸ್ವಸ್ಥತೆಗೊಳಗಾಗುವುದು ಈ ರೋಗದ ಸಾಮಾನ್ಯ ಲಕ್ಷಣಗಳಾಗಿವೆ.

ಎಚ್ಚರಿಕೆ ಕ್ರಮಗಳು:

- ಕೆಮ್ಮು, ಸೀನುವಾಗ ಬಾಯಿ ಮತ್ತು ಮೂಗನ್ನು ಕರವಸ್ತ್ರದಿಂದ ಅಥವಾ ಟಿಶ್ಯೂ ಕಾಗದದಿಂದ ಮುಚ್ಚಿಕೊಳ್ಳಬೇಕು
- ಕೈಗಳನ್ನು ಸಾಬೂನಿನು ಮತ್ತು ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳುವುದು.
- ಕೈತೊಳೆಯದೆ ಕಣ್ಣು, ಮೂಗು, ಬಾಯಿ ಮುಟ್ಟಬಾರದು.
- ಅತಿಯಾದ ಜನಸಂದಣಿ ಇರುವ ಸ್ಥಳಗಳಿಗೆ ಹೋಗುವುದನ್ನು ನಿಯಂತ್ರಿಸಬೇಕು. ಅಗತ್ಯವಿದ್ದಲ್ಲಿ ಮಾಸ್ಕ್ ಧರಿಸಬೇಕು.
- ಫ್ಲೂದಿಂದ ಬಳಲುತ್ತಿರುವ ವ್ಯಕ್ತಿಗಳಿಂದ ಅಂತರ ವಿರಲಿ.
- ಚೆನ್ನಾಗಿ ನಿದ್ದೆ ಮಾಡುವುದು, ದೈಹಿಕ ಚಟುವಟಿಕೆ ಹಾಗೂ ಒತ್ತಡವನ್ನು ಪರಿಣಾಮಕಾರಿಯಾಗಿ ನಿಭಾಯಿಸಬೇಕು.
- ಸಾಕಷ್ಟು ನೀರು ಕುಡಿಯುವುದು ಮತ್ತು ಪೌಷ್ಟಿಕ ಆಹಾರವನ್ನು ಸೇವಿಸುವುದು ಉತ್ತಮ.

ಪಶ್ಚಿಮದಲ್ಲಿ ವಿದ್ಯುತ್, ನೀರಿನ ಸಮಸ್ಯೆ ಹೆಚ್ಚಳ

ಬೆಂಗಳೂರು: ಬೇಸಿಗೆಯಲ್ಲಿ ವಿದ್ಯುತ್ ಕಡಿತ ಹಾಗೂ ನೀರಿನ ಸಮಸ್ಯೆಯಿಂದ ಬೆಂಗಳೂರು ಪಶ್ಚಿಮ ವಿಭಾಗ ಸಮಸ್ಯೆಗೊಳಗಾಗಿದ್ದು, ಎರಡು ದಿನಗಳಿಂದ ಜನರು ಪರದಾಡುವಂತಾಗಿದೆ. ನಗರದ ಪೀಣ್ಯ, ವಿಜಯನಗರ, ಬ್ಯಾಡರಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಕಡಿತಗೊಂಡಿದ್ದು, ನೀರಿನ ಸಮಸ್ಯೆಯೂ ತಲೆದೋರಿದೆ. ಕೇವಲ ನಿವಾಸಿಗಳು ಮಾತ್ರವಲ್ಲದೆ ಅನೇಕ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳು ತೊಂದರೆಗೆ ಒಳಗಾಗಿವೆ.

ಕಳೆದ ಎರಡು ದಿನಗಳಿಂದ ಒಂದು ಗಂಟೆ ವಿದ್ಯುತ್ ನೀಡಿ ಎರಡು ಗಂಟೆಗಳಿಗೂ ಹೆಚ್ಚು ಕಾಲ ಕಡಿತಗೊಳಿಸುತ್ತಾರೆ. ನೀರನ್ನು ಪಂಪ್ ಮಾಡಲು ಸಾದ್ಯವಾಗುತ್ತಿಲ್ಲ, ವಿದ್ಯಾರ್ಥಿಗಳು ಹಾಗೂ ಕೃಷಿಕರಿಗೆ ಅನುಕೂಲವಾಗುವಂತೆ ಮುಂದಿನ ಮೂರು ತಿಂಗಳು ವಿದ್ಯುತ್ ಕಡಿತಗೊಳಿಸುವುದಿಲ್ಲ ಎಂದು ಘೋಷಿಸಿದ್ದ ಮರುದಿನದಿಂದ ಈ ಸಮಸ್ಯೆ ಪ್ರಾರಂಭವಾಗಿದ್ದು, ನೀರು ವಿತರಕರು ಹೆಚ್ಚಿನ ಬೆಲೆಗೆ ಮಾರುತ್ತಿರುವ ನೀರನ್ನು ಖರೀದಿ ಮಾಡುವಂತಾಗಿದೆ. ನೀರನ್ನು ಪಂಪ್ ಮಾಡಲು ಸಾಧ್ಯವಾಗದ ಕಾರಣ, ನೀರನ್ನು ಖರೀದಿಸುವಂತೆ ನಮ್ಮ ಮೇಲೆ ಒತ್ತಡ ಹೇರಲಾಗಿದ್ದು, ವಿದ್ಯುತ್ ಕಡಿತದಿಂದ ನೀರು ಕೊಡುವವರು ಕ್ಯಾನ್‌ಗೆ 15-20 ರು. ತೆಗೆದುಕೊಳ್ಳುತ್ತಿದ್ದಾರೆ. ಸಾಮಾನ್ಯ ದಿನದಲ್ಲಿ 5 ರು.ದರ ವಿಧಿಸುತ್ತಿದ್ದು, ಜನರು ಕಳ್ಳ ಮಾರ್ಗದಲ್ಲಿ ನೀರು ಮಾರಾಟ ಮಾಡುತ್ತಿದ್ದಾರೆ ಎಂದು ನಿವಾಸಿಗಳು ಆರೋಪಿಸಿದ್ದಾರೆ.